ಕರ್ನಾಟಕ ಸರ್ಕಾರ-ಜಿಲ್ಲಾ ಪಂಚಾಯತ್-ಸಾರ್ವಜನಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಸಮಿತಿ-ಶಿವಮೊಗ್ಗ ಜಿಲ್ಲೆ

ಸಂಖ್ಯೆ :ಸಶಿಅ:ಎ2 :ಇಕೋ-ಕ್ಲಬ್/08/2019-20 ದಿನಾಂಕ : 26.02.2020

ಇವರಿಗೆ,
ಮಾನ್ಯ ಮಹಾ ನಿರ್ದೇಶಕರು
ಪ.ನಿ.ನೀ.ಸಂ.ಸಂ ಹಸಿರು ಭವನ
ದೊರೆಸಾನಿಪಾಳ್ಯ ಅರಣ್ಯ ಆವರಣ
ವಿನಾಯಕನಗರ ವೃತ್ತ, ಜೆ.ಪಿ ನಗರ
5ನೇ ಹಂತ ಬೆಂಗಳೂರು-560078

ಮಾನ್ಯರೇ

ವಿಷಯ : ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮದಡಿಯಲ್ಲಿ ದಿನಾಂಕ : 19.02.2020 ರಂದು ನಡೆದ ಜಿಲ್ಲಾ ಅನುಷ್ಠಾನ ಮೇಲ್ವಿಚಾರಣಾ ಸಮಿತಿ ಸಭೆಯ ನಡಾವಳಿ ಕುರಿತು.

ಉಲ್ಲೇಖ : EMPRI NGC ಪತ್ರ ಸಂಖ್ಯೆ : ಎಂಪ್ರಿ/ಸಿ ಆರ್-111/ಎನ್.ಜಿ.ಸಿ/2019-20/1548 ದಿ : 20.01.2020

ಮೇಲಿನ ವಿಷಯ ಮತ್ತು ಉಲ್ಲೇಖದನ್ವಯ 2019-20ನೇ ಸಾಲಿನಲ್ಲಿ ರಾಷ್ಟ್ರೀಯ ಹಸಿರು ಪಡೆ ಕಾರ್ಯಕ್ರಮವನ್ನು ಜಿಲ್ಲಾ ಹಂತದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಅನುಷ್ಠಾನ ಮೇಲ್ವಿಚಾರಣಾ ಸಮಿತಿ ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಶಿವಮೊಗ್ಗ ಇಲ್ಲಿ ದಿನಾಂಕ : 19.02.2020 ರಂದು ನಡೆಸಲಾಯಿತು. ಇದರೊಂದಿಗೆ ಸಭಾ ನಡಾವಳಿಯನ್ನು ಲಗತ್ತಿಸಿ ಸದರಿ ಮಾಹಿತಿಯನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

ಉಪನಿರ್ದೇಶಕರು ಹಾಗೂ ಪದನಿಮಿತ್ತ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

Scanned by CamScanner

ಕರ್ನಾಟಕ ಸರ್ಕಾರ-ಜಿಲ್ಲಾ ಪಂಚಾಯತ್-ಸಾರ್ವಜನಿಕ ಶಿಕ್ಷಣ ಇಲಾಖೆ
ಸಮಗ್ರ ಶಿಕ್ಷಣ ಅಭಿಯಾನ ಸಮಿತಿ-ಶಿವಮೊಗ್ಗ ಜಿಲ್ಲೆ

ದಿನಾಂಕ : 11/09/2019.

# ಸಭಾ ನಡವಳಿ

ದಿನಾಂಕ : 19/02/2020 ರಂದು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಹಸಿರುಪಡೆ ಕಾರ್ಯಕ್ರಮದ ಜಿಲ್ಲಾ ಅನುಷ್ಠಾನ ಮೇಲ್ವಿಚಾರಣಾ ಸಮಿತಿ ಸಭೆಗೆ ಈ ಕೆಳಕಂಡ ಸದಸ್ಯರುಗಳು ಹಾಜರಾಗಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದವರು :**

1. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಶಿವಮೊಗ್ಗ
2. ಉಪಅರಣ್ಯ ಸಂರಕ್ಷಣಾಧಿಕಾರಿಗಳು ಅರಣ್ಯ ಇಲಾಖೆ, ಶಿವಮೊಗ್ಗ
3. ಉಪಮಾಲಿನ್ಯ ನಿಯಂತ್ರಣಾಧಿಕಾರಿಗಳು, ಶಿವಮೊಗ್ಗ
4. ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ ಶಿವಮೊಗ್ಗ
5. ಉಪನಿರ್ದೇಶಕರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಶಿವಮೊಗ್ಗ
6. ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಶಿವಮೊಗ್ಗ
7. ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಶಿವಮೊಗ್ಗ
8. ಡಿವೈಪಿಸಿ, ಎಸ್.ಎಸ್.ಎ ಶಿವಮೊಗ್ಗ.
9. ಡಿವೈಪಿಸಿ, ಆರ್.ಎಂ.ಎಸ್.ಎಸ್. ಶಿವಮೊಗ್ಗ.
10. ಶ್ರೀ ಜನಾರ್ಧನ.ಜಿ.ಎಲ್. ಪರಿಸರ ಅಧ್ಯಯನ ಕೇಂದ್ರ ಗಾಜನೂರು, ಶಿವಮೊಗ್ಗ.
11. ಶ್ರೀ ಪರಿಸರ ನಾಗರಾಜ್ ಶಿವಮೊಗ್ಗ.
12. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಎಂಪ್ರಿ) ಬೆಂಗಳೂರು
13. ಮುಖ್ಯೋಪಾಧ್ಯಯರು ಸ.ಪ್ರೌ.ಶಾಲೆ ಉಳ್ಳೂರು ಸಾಗರ ತಾಲ್ಲೂಕು.
14. ಮುಖ್ಯೋಪಾಧ್ಯಯರು ಸ.ಪ್ರೌ.ಶಾಲೆ ಹರಗಿ ಶಿಕಾರಿಪುರ ತಾಲ್ಲೂಕು.
15. ಮುಖ್ಯೋಪಾಧ್ಯಯರು ಸ.ಪ್ರೌ.ಶಾಲೆ ಯಡೂರು ಹೊಸನಗರ ತಾಲ್ಲೂಕು.
16. ಮುಖ್ಯೋಪಾಧ್ಯಯರು ಸ.ಪ್ರೌ.ಶಾಲೆ ಮಸಗಲ್ಲಿ ಹೊಸನಗರ ತಾಲ್ಲೂಕು.
17. ಮುಖ್ಯೋಪಾಧ್ಯಯರು ಸ.ಪ್ರೌ.ಶಾಲೆ ನ್ಯೂಟೌನ್ ಭದ್ರಾವತಿ ತಾಲ್ಲೂಕು

ಸಭೆಗೆ ಆಗಮಿಸಿದ ಎಲ್ಲಾ ಸದಸ್ಯರನ್ನು ಡಿವೈಪಿಸಿ ಗಣಪತಿರವರು ಸ್ವಾಗತ ಕೋರಿದರು ಹಾಗೂ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳನ್ನು ಪ್ರಸ್ತಾಪಿಸಿದರು.

ಶಿವಮೊಗ್ಗ ಜಿಲ್ಲೆಯಲ್ಲಿ 164 ಸರ್ಕಾರಿ ಶಾಲೆಗಳಲ್ಲಿ, 86 ಅನುದಾನಿತ ಶಾಲೆಗಳಲ್ಲಿ ಹಾಗೂ 250 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಟ್ಟು 500 ಶಾಲೆಗಳಲ್ಲಿ ಇಕೋ-ಕ್ಲಬ್‌ಗಳಿವೆ. ಇಕೋ-ಕ್ಲಬ್ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಕಲಿಸುವ ಕಾರ್ಯ ಮಾಡುತ್ತಿದ್ದೇವೆ. ಇನ್ನೂ ಪರಿಣಾಮಕಾರಿಯಾಗಿಸಲು ತಮ್ಮೆಲ್ಲರ ಸಲಹೆ, ಸೂಚನೆ, ಸಹಕಾರವನ್ನು ನೀಡಬೇಕೆಂದು ಸಭೆಯಲ್ಲಿ ಮನವಿ ಮಾಡಿದರು.

ಹಸಿರು ಪಡೆಗೆ ಸಂಬಂಧಿಸಿದಂತೆ ಏನು ಮಾಡುತ್ತಿರುವಿರೆಂದು ಜಿಲ್ಲಾಧಿಕಾರಿಗಳು ಪ್ರಶ್ನಿಸಿದಾಗ ಸರ್ಕಾರಿ ಪ್ರೌಢಶಾಲೆ ಉಳ್ಳೂರು ಶಾಲೆಯ ಮುಖ್ಯಶಿಕ್ಷಕರು ಜೀವವೈವಿಧ್ಯತೆಯ ರಕ್ಷಣೆ, ಅದರ ಮಹತ್ವ, ಹಸಿರಿನ ಮಹತ್ವ, ಕಾಡಿನ ಮಹತ್ವದ ಬಗ್ಗೆ ಮಾಹಿತಿ ನೀಡುತ್ತೇವೆಂದು ತಿಳಿಸಿದರು.

Scanned by CamScanner

30 ರಿಂದ 50 ಮಕ್ಕಳಿರುವ ಇಕೋ-ಕ್ಲಬ್ ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಚಟುವಟಿಕೆಗಳನ್ನು ಮಾಡುತ್ತಿರುವ ಬಗ್ಗೆ ಕೇಳಿದಾಗ, ಸರ್ಕಾರಿ ಪ್ರೌಢಶಾಲೆ ಹರಗಿಯ ಮುಖ್ಯಶಿಕ್ಷಕರು ಸ್ಥಳೀಯ ಸ್ವಚ್ಛತೆ, ಸ್ಥಳೀಯವಾಗಿ ಕಾಡಿನಲ್ಲಿ ಕೆಲವೇ ಮೀಟರ್ ದೂರದಲ್ಲಿ ಜೀವವೈವಿಧ್ಯತೆಯಿದೆ, ಅದರ ರಕ್ಷಣೆ ಹಾಗೂ ಮರಗಳ ಪರಿಚಯ ಮಾಡುತ್ತೇವೆಂದು ತಿಳಿಸಿದರು.

ಕಳೆದ ವರ್ಷದಲ್ಲಿ ಶ್ರಮದಾನ ಮಾಡಿರುವ ಬಗ್ಗೆ ವಿವರವನ್ನು ಮಾನ್ಯ ಜಿಲ್ಲಾಧಿಕಾರಿಗಳು ಮಾಹಿತಿಯನ್ನು ಕೇಳಿದಾಗ ಶ್ರಮಾದಾನ ಮಾಡಿರುವ ಬಗ್ಗೆ ಸರ್ಕಾರಿ ಪ್ರೌಢಶಾಲೆ ಯಡೂರು ಶಾಲೆಯ ಮುಖ್ಯಶಿಕ್ಷಕರು, ಬಸ್ ಸ್ಟಾಂಡ್ ಸ್ವಚ್ಛತೆ, ಬಾವಿಗಳಿಗೆ ಗಲೀಜು ಮಾಡಬಾರದೆಂದು ಬೋರ್ಡ್ ಹಾಕಿರುವುದು, ಕುಡಿಯುವ ನೀರಿನ ಘಟಕದ ಸ್ವಚ್ಛತೆ ಮತ್ತು ಪೇಂಟ್ ಮಾಡಿರುವುದು. ಶಾಲೆಯಲ್ಲಿ ಗಿಡನೆಡುವುದು. ಬೇಲಿ ಹಾಕಿಸುವುದನ್ನು ಮಾಡಿರುವುದಾಗಿ ತಿಳಿಸಿದರು.

ಇಕೋ-ಕ್ಲಬ್ ಚಟುವಟಿಕೆಯಡಿ ತಿಂಗಳಲ್ಲಿ ಹಮ್ಮಿಕೊಂಡಿರುವ ಚಟುವಟಿಕೆಗಳ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಕೇಳಿದಾಗ ಉಳ್ಳೂರು ಶಾಲೆಯ ಮುಖ್ಯಶಿಕ್ಷಕರು ತಿಂಗಳಿಗೆ 2 ರಿಂದ 3 ಚಟುವಟಿಕೆ ಮಾಡುವುದಾಗಿ ತಿಳಿಸಿದರು.

ಇಕೋ-ಕ್ಲಬ್ ಶಾಲೆಗಳಿಗೆ ಚಟುವಟಿಕೆ ನಡೆಸಲು ಪ್ರತಿ ಶಾಲೆಗೆ ಬಿಡುಗಡೆಯಾಗುವ ಅನುದಾನದ ಬಗ್ಗೆ ಮತ್ತು ವಾರ್ಷಿಕ ಕ್ರಿಯಾ ಯೋಜನೆಯ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಕೇಳಿದಾಗ ಈ ಬಗ್ಗೆ ಎಂಪ್ರಿ ಸಂಸ್ಥೆ ಬೆಂಗಳೂರು ಇದರ ಜಿಲ್ಲಾ ಸಂಯೋಜಕರು ಪ್ರತಿ ಶಾಲೆಗೆ ರೂ.5000 ಅನುದಾನ ನೀಡಿರುವುದಾಗಿ ತಿಳಿಸಿದರು. ವಾರ್ಷಿಕ ಕ್ರಿಯಾ ಯೋಜನೆಯಂತೆ ಶಾಲೆಗಳಲ್ಲಿ ಪ್ರತಿ ತಿಂಗಳು ಎರಡನೇ ಶನಿವಾರ ಮತ್ತು ನಾಲ್ಕನೇ ಶನಿವಾರದಂದು ಚಟುವಟಿಕೆ ಹಮ್ಮಿಕೊಳ್ಳಲು ತಿಳಿಸಿದರು.

ಎನ್.ಆರ್.ಇ.ಜಿ. ಯಲ್ಲಿ ಕಿಚನ್ ಗಾರ್ಡನ್ ಮಾಡಲು ಅವಕಾಶವಿರುವುದಾಗಿ ಮತ್ತು ಪ್ರತಿ ತಾಲ್ಲೂಕಿಗೆ 100 ರಿಂದ 150 ಶಾಲೆ ಅಂಗನವಾಡಿಗಳಿಗೆ ಸೀಡ್ಸ್ ನೀಡುವುದಾಗಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು ತಿಳಿಸಿದರು. ಇದನ್ನು ವಿತರಿಸುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು ಕೇಳಿದಾಗ ಕ್ಷೇತ್ರಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಶಿಕ್ಷಕರುಗಳಿಗೆ ಕೊಡುವುದಾಗಿ ತಿಳಿಸಿದರು. ನಂತರ ಮಾನ್ಯ ಜಿಲ್ಲಾಧಿಕಾರಿಯವರು ಇಕೋ-ಕ್ಲಬ್ ಪ್ರಭಾರದ ಶಿಕ್ಷಕರಿಗೆ ಕೊಡಬೇಕೆಂದು ತಿಳಿಸಿದರು.

ಪರಿಸರ ಅಧ್ಯಯನ ಕೇಂದ್ರ, ಶಿವಮೊಗ್ಗದ ಶ್ರೀ ಜನಾರ್ಧನ್ ರವರು ಶಾಲೆಯಲ್ಲಿ ಗಾರ್ಡನ್ ಜೊತೆ ಹೋಮ್ ಗಾರ್ಡನ್ ಮಾಡುವ ಬಗ್ಗೆ ಪ್ರಸ್ತಾಪಿಸಿದಾಗ ಮಾನ್ಯ ಜಿಲ್ಲಾಧಿಕಾರಿಯವರು ಶಾಲೆಯಲ್ಲಿ ಹಂತ ಹಂತವಾಗಿ ಮಾಡಿದರೆ ನಂತರದಲ್ಲಿ ಮನೆಯಲ್ಲಿ ಮಾಡುವರೆಂದು ತಿಳಿಸಿದರು.

ಕಾಂಪೌಂಡ್ ಇರುವ ಶಾಲೆಯಲ್ಲಿ ಯಾವ ಯಾವ ಗಿಡಗಳನ್ನು ಬೆಳೆಸಿರುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು ಕೇಳಿದಾಗ ಸರ್ಕಾರಿ ಪ್ರೌಢಶಾಲೆ ಯಡೂರು ಶಾಲೆಯ ಮುಖ್ಯಶಿಕ್ಷಕರು ಕೆಲವು ಹಣ್ಣಿನ ಗಿಡಗಳು, ಮುರಗಲು, ಸಂಪಿಗೆ, ಪೇರಲೆ, ಕಾಡಿನ ಗಿಡಗಳು, ತರಕಾರಿ, ಸೊಪ್ಪು ಮತ್ತು ಔಷಧೀಯ ಗಿಡಗಳನ್ನು ಬೆಳಸಿರುವುದಾಗಿ ತಿಳಿಸಿದರು.

ನಂತರ ಜಿಲ್ಲಾಧಿಕಾರಿರವರು ಜಿಲ್ಲೆಯಲ್ಲಿನ 500 ಇಕೋ-ಕ್ಲಬ್ ಶಾಲೆಗಳಲ್ಲಿನ ಚಟುವಟಿಕೆ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಪಡೆಯುವಂತೆ ಉಪನಿರ್ದೇಶಕರಿಗೆ ಸೂಚಿಸಿದರು.

Scanned by CamScanner

1. ಶಾಲೆಗಳಲ್ಲಿ ಇಕೋ-ಕ್ಲಬ್ ಚಟುವಟಿಕೆ ಮಾಡಿರುವ ಮತ್ತು ಮಾಡದಿರುವ ಬಗ್ಗೆ ಮಾಹಿತಿಯನ್ನು ತೆಗೆದುಕೊಳ್ಳುವುದು.

2. ಮಾನ್ಯ ಮುಖ್ಯಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ ಇವರಿಗೆ ಇಕೋ-ಕ್ಲಬ್ ಶಾಲೆಗಳ ಪಟ್ಟಿ ನೀಡಿ ಅವರು MGNREGA ಕಾರ್ಯಕ್ರಮದಡಿಯಲ್ಲಿ ಕಾಂಪೌಂಡ್ ಮಾಡಲು ಸಹಕಾರ ನೀಡವಂತೆ ಕೋರುವುದು.

3. ಇಕೋ-ಕ್ಲಬ್ ಶಾಲೆಗಳಿಗೆ ಪ್ರತಿ ವರ್ಷ ಸೀಡ್ಸ್ ನೀಡುವ ಬಗ್ಗೆ ತೋಟಗಾರಿಕೆ ಇಲಾಖೆಗೆ ಕೋರುವುದು.

4. Success & failure ನ್ನು ಗುರುತಿಸಲು ಜಿಲ್ಲಾ ಹಂತದ ಎಲ್ಲಾ ಅಧಿಕಾರಿಗಳು ಮೇಲ್ವಿಚಾರಣೆ ಮಾಡುವಂತೆ ಕ್ರಮ ವಹಿಸುವುದು.

5. Rain Water Harvesting, compound ಗಳನ್ನು MNREGA ಯೋಜನೆಯಡಿಯಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳುವುದು.

6. ಅರಣ್ಯ ಇಲಾಖೆಯಿಂದ ಶಾಲೆಗಳಿಗೆ ಗಿಡಗಳನ್ನು ಒದಗಿಸುವಂತೆ ತಿಳಿಸಿದರು.

ಮುಂದಿನ ಸಭೆಗೆ ನಡೆಯುವುದರೊಳಗೆ ಇಕೋ-ಕ್ಲಬ್ ಚಟುವಟಿಕೆಗಳು ನಡೆಯುವ ಬಗ್ಗೆ ದತ್ತಾಂಶವನ್ನು ತಯಾರಿಸಿಕೊಳ್ಳಲು ತಿಳಿಸಿದರು ಹಾಗೂ ಮುಂದಿನ ಸಭೆಯನ್ನು 3 ತಿಂಗಳೊಳಗೆ ಹಮ್ಮಿಕೊಳ್ಳಲು ತಿಳಿಸಿದರು.

ಎಲ್ಲಾ ಅಧಿಕಾರಿಗಳಿಗೆ ಡಿವೈಪಿಸಿ ಗಣಪತಿರವರು ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ
ಸದಸ್ಯ ಕಾರ್ಯದರ್ಶಿ
ಜಿಲ್ಲಾ ಅನುಷ್ಠಾನ ಮೇಲ್ವಿಚಾರಣಾ ಸಮಿತಿ
ರಾಷ್ಟ್ರೀಯ ಹಸಿರು ಪಡೆ, ಶಿವಮೊಗ್ಗ

Scanned by CamScanner